ದಿನಾಂಕ : 16-06-2017 ಓ ಎಸ್ ನಂ. 240/2013

ಡಿ. ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಸಿ.ಹೆಚ್.ಹೆಚ್ ವಕೀಲರಿಂದ</u>

ನಿಡಿ-9 ರ ಮೂಲ ದಾಖಲೆಯನ್ನು ಹಾಜರುಪಡಿಸಿದ್ದೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ನಿಡಿ-9(ಎ) ಎಂದು ಗುರುತಿಸಲಾಯಿತು. ನಿಡಿ-9(ಎ) ಯಲ್ಲಿ ನಾನು ಮತ್ತು ನನ್ನ ಸಹೋದರರು ಮತ್ತು ಹಿರಿಯರು ಸಹಿ ಮಾಡಿದ್ದೇವೆ. ನಿಡಿ-9(ಎ) ಗೆ ಸಹಿಯಾಗಿ ಹೆಬ್ಬಟ್ಟಿನ ಗುರುತನ್ನು ನನ್ನ ಸಮಕ್ಷಮ ಹಾಕಿದ್ದೇವೆ. ಮೊದಲನೆಯದಾಗಿ ರುದ್ರಪ್ಪ ಶಿವಪ್ಪ ಸುಣದಕುಂಪಿ ಹೆಬ್ಬಟ್ಟಿನ ಗುರುತನ್ನು ಹಾಕಿದರು. 2ನೇಯದಾಗಿ ಉಳುವಪ್ಪ ಸುಣದಕುಂಪಿ ಹೆಬ್ಬಟ್ಟಿನ ಗುರುತನ್ನು ಹಾಕಿದರು. 3ನೇಯದಾಗಿ ನಾನು ಹೆಬ್ಬಟ್ಟಿನ ಗುರುತನ್ನು ಹಾಕಿದ್ದೇನೆ. ನಿಡಿ-9 ರಲ್ಲಿ ಹಿರಿಯರು ಮಾಡಿರುವ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ, ಈ ಹಂತದಲ್ಲಿ ವಾದಿ ಪರ ವಕೀಲರು ತಕರಾರು



ಮಾಡಿರುವುದರಿಂದ ರುಜುವಾತಿನ ಷರತ್ತಿಗೆ ಒಳಪಟ್ಟು ಸಹಿಗಳನ್ನು ಗುರುತಿಸಿಕೊಳ್ಳಲು ಅನುಮತಿ ನೀಡಿದೆ. ಹಿರಿಯರಾಗಿ ಭೀಮಪ್ಪ ಬಸಪ್ಪ ಸುಂಕದ ಇವರು ಸಹಿ ಮಾಡಿದ್ದಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. 2ನೇ ಯದಾಗಿ ಚಂದ್ರು ಭೀಮಪ್ಪ ಲಗಮನ್ನನವರ ಸಹಿ ಮಾಡಿದ್ದಾರೆ ಅವರ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ತಹಶೀಲ್ದಾರ ಇವರಿಗೆ ನೀಡಿದ ವರದಿಯನ್ನು ಹಾಜರುಪಡಿಸಿದ್ದೇನೆ.

ಈ ಹಂತದಲ್ಲಿ ಶ್ರೀ ಸಿ.ಹೆಚ್.ಹೆಚ್ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು,.

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ